KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೯, ೨೦೧೦ (ಭಾದ್ರಪದ ೧೮, ಶಕ ವರ್ಷ ೧೯೩೨)	ಸಂಚಿಕೆ ೩೬

ಭಾಗ – ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು.

FINANCE SECRETARIAT

NOTIFICATION

No:FD 671 Exp-12/2010, Bangalore, Dated:10th August, 2010

In exercise of the powers conferred under Section 4(g) of the Karnataka Transparency in Public Procurements Act, 1999, Government hereby notify that Provisions of the said Act shall not apply to the Energy Department, for engaging the services of M/s Feedback Ventures Private Limited at a cost of Rs.102.00 lakhs (excluding taxes and out of pocket expenses) to study the proposal for performance improvement of Raichur Thermal Power Plant, subject to the following:

(a) The total project if successful of Rs.102 lakhs and if unsuccessful of Rs.42 lakhs shall be paid from the internal resources of KPCL.

(b) Since the success of the project as highlighted in the proposal of the M/s Feedback Ventures depends on the cooperation of KPCL staff, the Energy Department shall ensure that the KPCL top management is totally on Board and committed to support this performance improvement project.

BY ORDER AND IN THE NAME OF GOVERNOR OF KARNATAKA,

H. SHEKHARAPPA

Under Secretary to Government,

Finance Department (Procurement Cell)

PR-762

FINANCE SECRETARIAT

NOTIFICATION

No:FD3020 JS(A)/2010, Bangalore, Dated:13th August, 2010

In exercise of the powers conferred under Section 4(g) of the Karnataka Transparency in Public Procurements Act, 1999, Government hereby notify that Provisions of the said Act shall not apply to the Urban Development Department for taking up of works of urgent nature of about Rupees Twenty five crores pertaining to Gulbarga City Corporation subject to the condition that the works are entrusted to professionally competent agencies and quality work is executed at competitive cost.

BY ORDER AND IN THE NAME OF GOVERNOR OF KARNATAKA,

A.N. SRIDHARA

PR-763

Joint Secretary to Government,

Finance Department (Admn)

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಓ 106 ಸಿಎಸ್‌ಎಸ್ 2010, ಬೆಂಗಳೂರು, ದಿನಾಂಕ:11ನೇ ಆಗಸ್ಟ್, 2010

ಈ ಹಿಂದೆ ಸರ್ಕಾರದಿಂದ ಮಾಡಿರುವ ಎಲ್ಲಾ ನಾಮನಿರ್ದೇಶನಗಳನ್ನು ರದ್ದುಪಡಿಸಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ(1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು ಕೋಲಾರ ಜಿಲ್ಲಾ ಸಹಕಾರ ಯೂನಿಯನ್ ನಿ., ಕೋಲಾರ, ಕೋಲಾರ ಜಿಲ್ಲೆ ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆವಿಗೂ ನಾಮನಿರ್ದೇಶನ ಮಾಡುತ್ತದೆ.

1) ಶ್ರೀ ಎಂ. ವೆಂಕಟಪ್ಪ ಬಿನ್ ಟಿ. ಮುನಿಯಪ್ಪ, ಕವರನಹಳ್ಳಿ, ಎಸ್.ಜಿ. ಕೋಟೆ ಅಂಚೆ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ.

2) ಶ್ರೀಮತಿ ಉಮಾದೇವಿ ಟಿ.ಎಸ್. ಕೋಂ ಎಸ್.ಎನ್. ನರಸಪ್ಪ, ಯಲ್ದೂರು ಗ್ರಾಮ ಮತ್ತು ಅಂಚೆ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ.

3) ಶ್ರೀ ಹೆಚ್.ಎಂ. ತಿಮ್ಮರಾಯಪ್ಪ ಬಿನ್ ಹೆಚ್. ಮುನಿಯಪ್ಪ, ಭವ್ಯಶ್ರೀಹರ್ಷಿತ ನಿಲಯ, ಕೀಲುಕೋಟೆ, ಸತ್ಯಮ್ಮ ದೇವಸ್ಥಾನದ ಹತ್ತಿರ, ಕೋಲಾರ ನಗರ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ನೂಲಿ

ಪಿ.ಆರ್.765

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ,

ಸಹಕಾರ ಇಲಾಖೆ.

KARNATAKA GOVERNOR'S SECRETARIAT

NOTIFICATION

No.GS 8 AUM 2009 BANGALORE, Dated:18th August, 2010

WHEREAS, the Board of Management, University of Agricultural Sciences, Bangalore was constituted in terms of Section 12 (1) of the University of Agricultural Sciences Act,2009 vide Notification No GS 8 AUM 2009 Dated 20th May 2010, leaving the position under Section 12 (2) (VII) vacant for want of appropriate proposal from the Government.

WHEREAS, in file N0 KRI THO E 182 KRI VI VI 2010 the State Government has indicated three nominees on the Board of Management of the University of Agricultural Sciences, Bangalore under the

category of Progressive Farmers in terms of Section 12(2)(vii) of the University of Agricultural Sciences, Act, 2009.

NOW THEREFORE, I H.R. BHARDWAJ, Governor of Karnataka and Chancellor University of Agricultural Sciences, Bangalore in exercise of the powers conferred under Section 12(1) of the University of Agricultural Sciences Act, 2009 hereby appoint the following persons on the Board of Management of the University of Agricultural Sciences, Bangalore:

Section	**Category**	**Sl.No.**	**Persons appointed**
12(2)(VII)	Five Progressive farmers from the Jurisdiction of the University of which two persons belonging to the schedule Caste or the Scheduled Tribes to be nominated by the State Government	7	Sri K. Basavakumar S/o B. Haleshappa. Bikkonahalli. Kommanal Post, Shimoga Taluk and District. (General)
		8	Sri Rajappa, S/o Kenchamma, Kattalagere, Channagiri Taluka, Davanagere District (ST)
		9	Sri H Shivappa S/o Hanumanthappa, Harihara, Davangere District.(SC)

The term of office of the above members shall be until 19-5-2013.

Sd/-

H.R. BHARDWAJ

Governor and Chancellor

V.S. JERE

PR-764 Under Secretary to Governor.

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 223 ಬೆಮಾಪ್ರಾ 2010, ಬೆಂಗಳೂರು, ದಿನಾಂಕ:10ನೇ ಆಗಸ್ಟ್, 2010

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4-C (3)(iii)(b) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಆರ್.ಪಿ. ಗುತ್ತಲ, ನಗರ ಸಭಾ ಸದಸ್ಯರು, ರಾಣಿಬೆನ್ನೂರು ಇವರನ್ನು ರಾಣಿಬೆನ್ನೂರು, ಯೋಜನಾ ಪ್ರಾಧಿಕಾರದ ಸದಸ್ಯರನ್ನಾಗಿ ಸರ್ಕಾರದ ಇಚ್ಛಾನುಸಾರ ಅಥವಾ ಅವರು ನಗರ ಸಭೆಯ ಸದಸ್ಯರಾಗಿರುವ ಅವಧಿಯವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ನಾಮನಿರ್ದೇಶನ ಮಾಡಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಂ. ಹಿರೇಮಠ

ಪಿ.ಆರ್.767 ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ.

PERSONNEL AND ADMINISTRATIVE REFORMS SECRETARIAT

NOTIFICATION

No.DPAR 363 SAS 2009, Bangalore, Dated:16th August, 2010

Notification No.14015/11/2008-AIS(I)-B, Dated:11.08.2010 of Government of India, Ministry of Personnel, Public Grievances & Pensions, Department of Personnel & Training, New Delhi is hereby republished.

No.14015/11/2008-AIS(I)-B

Government of India

Ministry of Personnel, Public Grievances & Pensions

(Department of Personnel & Training)

New Delhi, the 11th August, 2010

NOTIFICATION

In pursuance of the order Dated:02.07.2010 passed by the Hon'ble CAT, Bangalore Bench in OA No.282/2009 filed by Sri. A.M. Kunjappa Vs. Union of India & Others and in exercise of the powers conferred by Rule 8(1) of the Indian Administrative Service (Recruitment) Rules, 1954 read with Regulation 9(1) of the Indian Administrative Service (Appointment by Promotion) Regulations, 1955 and Rule 3 of the Indian Administrative Service (Probation) Rules, 1954, the President is pleased to appoint Shri A.M. Kunjappa, a State Civil Service officer of Karnataka to the Indian Administrative Service against the vacancies determined by Government of India under Regulation 5(1) of the said Regulations in consultation with the State Government on the basis of inclusion of his name in the Select List for the year 2008, on probation until further orders and to allocate him to the Karnataka Cadre of IAS, under Rule 5(1) of the Indian Administrative Service (Cadre) Rules, 1954.

S.S. SHUKLA
Under Secretary to the Government of India

By Order and in the name of the Governor of Karnataka

K.G. ANANTHA

PR-766

Under Secretary to Government,
DPAR (Services-I).

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 632 ವೆಚ್ಚ–12/10, ಬೆಂಗಳೂರು, ದಿನಾಂಕ:19ನೇ ಆಗಸ್ಟ್, 2010

ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಇಲಾಖೆಗಳಿಗೆ ಹಾಗೂ ಕರ್ನಾಟಕ ಲೋಕಾಯುಕ್ತಕ್ಕೆ ಒಟ್ಟು ಮೂರು ತಿಂಗಳ ಕಾಲ ರೂ.2,77,956/– ವೆಚ್ಚದಲ್ಲಿ ನೇರವಾಗಿ ಬಿ.ಎಸ್.ಎನ್.ಎಲ್. ಸಂಸ್ಥೆಯಿಂದ ಇಂಟರ್‌ನೆಟ್ ಸಂಪರ್ಕ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಉತ್ಪನ್ನ/ಸೇವೆಯನ್ನು ಸ್ಪರ್ಧಾತ್ಮಕ ದರದಲ್ಲಿ ಸಂಗ್ರಹಿಸುವುದನ್ನು ಸಂಗ್ರಹಣಾ ಸಂಸ್ಥೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್. ಶೇಖರಪ್ಪ

ಪಿ.ಆರ್.769

ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 621 ವೆಚ್ಚ–12/10, ಬೆಂಗಳೂರು, ದಿನಾಂಕ:19ನೇ ಆಗಸ್ಟ್, 2010

ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಅತೀಗಣ್ಯ ವ್ಯಕ್ತಿಗಳ ಉಪಯೋಗಕ್ಕಾಗಿ ಮೆ: O.S.S. Air Management, ನವದೆಹಲಿ ಇವರಿಂದ ಟ್ವಿನ್ ಇಂಜಿನ್ ಹೆಲಿಕಾಪ್ಟರ್ ಸೇವೆಯನ್ನು ನೇರವಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ದಿನಾಂಕ:01.10.2010ರಿಂದ ಒಂದು ವರ್ಷದ ಅವಧಿಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಉತ್ಪನ್ನ/ಸೇವೆಯನ್ನು ಸ್ಪರ್ಧಾತ್ಮಕ ದರದಲ್ಲಿ ಸಂಗ್ರಹಿಸುವುದನ್ನು ಸಂಗ್ರಹಣಾ ಸಂಸ್ಥೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್. ಶೇಖರಪ್ಪ

ಪಿ.ಆರ್.770 ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 711 ವೆಚ್ಚ–12/10, ಬೆಂಗಳೂರು, ದಿನಾಂಕ:20ನೇ ಆಗಸ್ಟ್, 2010

ರಾಜ್ಯದ 7 ಪೈಲಟ್ ಜಿಲ್ಲೆಗಳಲ್ಲಿ Electronic Benefit Transfer (E.B.T.) ಯೋಜನೆಯನ್ನು ಜಾರಿಗೆ ತರಲು ಅಗತ್ಯವಿರುವ Management Information System and Public Grievance Redressal System (MIS & PFRS) ನ ಅಪ್ಲಿಕೇಷನ್ ಸಾಫ್ಟ್‌ವೇರ್ ಅಭಿವೃದ್ಧಿಪಡಿಸುವ ಕಾರ್ಯವನ್ನು ರೂ.16.55 ಲಕ್ಷಗಳ ವೆಚ್ಚದಲ್ಲಿ ನೇರವಾಗಿ NIC/NICSI ಸಂಸ್ಥೆಗೆ ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಆರ್ಥಿಕ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

NIC/NICSI ಸಂಸ್ಥೆಯು ಈ ಕಾಮಗಾರಿಗಳನ್ನು ಬೇರೆಯವರ ಮುಖಾಂತರ ಕೈಗೊಳ್ಳುವುದಾದಲ್ಲಿ ಕೆ.ಟಿ.ಪಿ.ಪಿ. ಅಧಿನಿಯಮ ಮತ್ತು ನಿಯಮಗಳನ್ನು ಪಾಲಿಸಬೇಕು. ಉತ್ತಮ ಗುಣಮಟ್ಟದ ಉತ್ಪನ್ನ/ಸೇವೆಯನ್ನು ಸ್ಪರ್ಧಾತ್ಮಕ ದರದಲ್ಲಿ ಸಂಗ್ರಹಿಸುವುದನ್ನು ಸಂಗ್ರಹಣಾ ಸಂಸ್ಥೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್. ಶೇಖರಪ್ಪ

ಪಿ.ಆರ್.771 ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಜಲಸಂಪನ್ಮೂಲ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಜಸಂಇ 13 ಸಿಎಬಿ 2009, ಬೆಂಗಳೂರು, ದಿನಾಂಕ:20ನೇ ಆಗಸ್ಟ್, 2010

ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1980ರ ಸೆಕ್ಷನ್ 4(2)(i)ರನ್ವಯ ಶ್ರೀ ಕೆ.ಶೇಖರಪ್ಪ ಬಿನ್ ರುದ್ರಪ್ಪ, ಪ್ರೇಮಾನಂದ ನಿಲಯ, ಕುಮದ್ವತಿನಗರ, ಶಿಕಾರಿಪುರ–577 427, ಶಿವಮೊಗ್ಗ ಜಿಲ್ಲೆ, ಇವರನ್ನು ಕಾಡಾ, ಭದ್ರಾ ಜಲಾಶಯ ಯೋಜನೆ, ಶಿವಮೊಗ್ಗ ಇಲ್ಲಿಗೆ ಅಧಿಕಾರೇತರ ಅಧ್ಯಕ್ಷರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ. ಶ್ರೀನಿವಾಸಲು

ಪಿ.ಆರ್.772 ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ–1),

ಜಲ ಸಂಪನ್ಮೂಲ ಇಲಾಖೆ.

WOMEN AND CHILD DEVELOPMENT SECRETARIAT

NOTIFICATION

No:WCD 129 PHP 2010, Bangalore, Dated:11th August, 2010

Sri K.V. Rajanna, President, Narendra Foundation, Siddapur, Pavagada Taluk, Tumkur District is appointed as Commissioner for Persons with Disabilities under Section 60(1) of the Persons with Disabilities (Equal Opportunities, Protection of Rights and Full Participation) Act, 1995 until further orders.

The terms and conditions under Section 60(3) of the Act will be issued separately.

By Order and in the Name of the Governor of Karnataka,

B. KAMALAMMA

PR-773

Under Secretary to Government,

Women and Child Development Department.

ಕಾರ್ಮಿಕ ಸಚಿವಾಲಯ

ಸೇರ್ಪಡೆ

ಸಂಖ್ಯೆ: ಕಾಇ 63 ಎಲ್‌ಎಂಡಬ್ಲ್ಯೂ 2010, ಬೆಂಗಳೂರು, ದಿನಾಂಕ:16ನೇ ಆಗಸ್ಟ್, 2010

ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 100 ಎಲ್‌ಎಂಡಬ್ಲ್ಯೂ 2009, ದಿನಾಂಕ:21.10.2009ರ ಸ್ವತಂತ್ರ ಸದಸ್ಯರ ಪಟ್ಟಿಯ ಕ್ರಮ ಸಂಖ್ಯೆ:(5)ರ ನಂತರ "ಕ್ರ.ಸಂ.(6), ಸಹಾಯಕ ಕಾರ್ಮಿಕ ಆಯುಕ್ತರು (ಕನಿಷ್ಠ ವೇತನ), ಕಾರ್ಮಿಕ ಆಯುಕ್ತರ ಕಛೇರಿ, ಬೆಂಗಳೂರು, ಇವರನ್ನು ಸದಸ್ಯ ಕಾರ್ಯದರ್ಶಿ" ಎಂಬುದಾಗಿ ಸೇರಿಸಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್.ಆರ್. ಪ್ರಭು

ಪಿ.ಆರ್.774

ಸರ್ಕಾರದ ಅಧೀನ ಕಾರ್ಯದರ್ಶಿ,

ಕಾರ್ಮಿಕ ಇಲಾಖೆ.

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 163 ಎಲ್‌ಆರ್‌ಎ 2010, ಬೆಂಗಳೂರು, ದಿನಾಂಕ:17ನೇ ಆಗಸ್ಟ್, 2010

ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 48ರ ಉಪ ಕಲಂ (1)(11)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಭೂ ನ್ಯಾಯ ಮಂಡಳಿಗೆ ಈ ಹಿಂದೆ ಮಾಡಿದ್ದ ಎಲ್ಲಾ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ, ಅವರ ಬದಲಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿ ಸದರಿ ಭೂ ನ್ಯಾಯ ಮಂಡಳಿಗಳನ್ನು ಪುನರ್ ರಚಿಸಿ ಆದೇಶ ಹೊರಡಿಸಿದೆ.

ಕ್ರಮ ಸಂಖ್ಯೆ	ಭೂ ನ್ಯಾಯ ಮಂಡಳಿಯ ಹೆಸರು	ಅಧಿಕಾರೇತರ ಸದಸ್ಯರ ಹೆಸರು ಮತ್ತು ವಿಳಾಸ
1.	ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.	1) ಶ್ರೀ ಹೆಚ್. ಪೂಜಪ್ಪ ತಂದೆ ಕೆಂಚಪ್ಪ, (ಮೀಸಲಾತಿ) ದೇವಗೊಂಡನಹಳ್ಳಿ 2) ಶ್ರೀ ಎಂ. ವೆಂಕಟೇಶ ತಂದೆ ಕೃಷ್ಣರೆಡ್ಡಿ ಮಾಗಳ 3) ಶ್ರೀ ಗಡ್ಡಿ ಚನ್ನಬಸಪ್ಪ ತಂದೆ ಮಾರ್ತಾಂಡಪ್ಪ, ಕುಂಬಳಿ 4) ಶ್ರೀ ಗಂಗಪ್ಪ ತಂದೆ ಕೆಂಚಪ್ಪ, ಹ್ಯಾರ್ಡ್.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ನಾರಾಯಣ ಗೌಡ

ಪಿ.ಆರ್.776

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಸುಧಾರಣೆ)

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 169 ಎಲ್‌ಆರ್‌ಎ 2010, ಬೆಂಗಳೂರು, ದಿನಾಂಕ:17ನೇ ಆಗಸ್ಟ್, 2010

ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 48ರ ಉಪ ಕಲಂ (1)(11)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಭೂ ನ್ಯಾಯ ಮಂಡಳಿಗೆ ಈ ಹಿಂದೆ ಮಾಡಿದ್ದ ಎಲ್ಲಾ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ, ಅವರ ಬದಲಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿ ಸದರಿ ಭೂ ನ್ಯಾಯ ಮಂಡಳಿಗಳನ್ನು ಪುನರ್ ರಚಿಸಿ ಆದೇಶ ಹೊರಡಿಸಿದೆ.

ಕ್ರಮ ಸಂಖ್ಯೆ	ಭೂ ನ್ಯಾಯ ಮಂಡಳಿಯ ಹೆಸರು	ಅಧಿಕಾರೇತರ ಸದಸ್ಯರ ಹೆಸರು ಮತ್ತು ವಿಳಾಸ
1.	ಬ್ರಹ್ಮಾವರ (ಹೆಚ್ಚುವರಿ) ಉಡುಪಿ ತಾಲ್ಲೂಕು.	1) ಶ್ರೀ ನಾರಾಯಣ ಮಾಸ್ಟರ್ ಬಿನ್ ಕೊರಗ, (ಮೀಸಲಾತಿ) ಕುಕ್ಕುಡೆ ಅಂಚೆ, ಹಾರಾಡಿ ಉಡುಪಿ. 2) ಶ್ರೀ ಅಶೋಕ ಕುಮಾರ್ ಬಿನ್ ಜಿ. ಕರಿಯಪ್ಪ, "ಶ್ರೀ ಭಗವತಿ ಪ್ರಿಯ ಸದನ್" ಕೆಳನೇಜಾರು, ಉಡುಪಿ. 3) ಶ್ರೀಮತಿ ಜಯಲಕ್ಷ್ಮಿ ಯದವ್ ಕೋಂ ವಿಜಯಗೊಲ್ಲ, "ದಿವ್ಯಶ್ರೀ" ಬಿರ್ತಿ, ಬ್ರಹ್ಮಾವರ, ಉಡುಪಿ. 4) ಶ್ರೀ ರಾಘವೇಂದ್ರ ಉಪ್ಪೂರು ಬಿನ್ ಸಂಜೀವ ರಾವ್, ಶ್ರೀ ಸಿದ್ಧಿವಿನಾಯಕ, ಫ್ಲೋರ್‌ಮಿಲ್, ತೆಂಕಬೆಟ್ಟು, ಉಪ್ಪೂರ, ಉಡುಪಿ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ನಾರಾಯಣ ಗೌಡ

ಪಿ.ಆರ್.777

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಸುಧಾರಣೆ)

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 47 ಎಲ್‌ಆರ್‌ಎಂ 2010, ಬೆಂಗಳೂರು, ದಿನಾಂಕ:13ನೇ ಆಗಸ್ಟ್, 2010

ಶ್ರೀ ಸ್ವಾಮಿ ದಯಾನಂದ ಸರಸ್ವತಿ ಎಜುಕೇಷನ್ ಅಂಡ್ ಕಲ್ಚರಲ್ ಟ್ರಸ್ಟ್, ಮೈಸೂರು, ಇವರಿಗೆ ಮೈಸೂರು ತಾಲ್ಲೂಕು, ಹಾಲಾಳು ಗ್ರಾಮದ ಸರ್ವೆ ನಂ.45/1 ರಲ್ಲಿ 2 ಎಕರೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ದಾನವಾಗಿ ಪಡೆಯಲು ಮೈಸೂರು ಜಿಲ್ಲಾಧಿಕಾರಿಯವರ ಅಧಿಕೃತ ಜ್ಞಾಪನ ಸಂಖ್ಯೆ: ಎಲ್‌ಆರ್‌ಎಫ್/ಎಸ್‌ಪಿಎಲ್/12/2007–08, ದಿನಾಂಕ:18.03.2008ರಲ್ಲಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109(1)ರಡಿ ಅನುಮತಿ ನೀಡಿ ಸಂಸ್ಥೆಯು ಉದ್ದೇಶವನ್ನು 2 ವರ್ಷದೊಳಗಾಗಿ ಪೂರೈಸುವಂತೆ ಷರತ್ತು ವಿಧಿಸಲಾಗಿತ್ತು. ಕಾರಣಾಂತರಗಳಿಂದ ನಿಗದಿತ ಅವಧಿಯೊಳಗೆ ಉದ್ದೇಶ ಪೂರೈಸಿಕೊಳ್ಳಲಾಗದೆ ಇರುವುದನ್ನು ಸರ್ಕಾರವು ಪರಿಶೀಲಿಸಿ ಅರ್ಜಿದಾರರು ಉದ್ದೇಶವನ್ನು ಪೂರೈಸಿಕೊಳ್ಳಲು ಮತ್ತೊಂದು ಅವಕಾಶ ನೀಡಿ ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ ಮತ್ತೆ 2 ವರ್ಷಗಳವರೆಗೆ ಕಾಲಾವಧಿಯನ್ನು ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ನಾರಾಯಣ ಗೌಡ

ಪಿ.ಆರ್.778

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಸುಧಾರಣೆ)

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಒ 107 ಸಿಎಸ್‌ಎಸ್ 2010, ಬೆಂಗಳೂರು, ದಿನಾಂಕ:18ನೇ ಆಗಸ್ಟ್, 2010

ಈ ಹಿಂದೆ ಸರ್ಕಾರದಿಂದ ಮಾಡಿರುವ ಎಲ್ಲಾ ನಾಮನಿರ್ದೇಶನಗಳನ್ನು ರದ್ದುಪಡಿಸಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ:11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಶ್ರೀಮತಿ ಶಶಿಕಲಾ ಕೋಂ ಶ್ರೀಧರಭಟ್, ಅವಲಗೋಡು ಅಂಚೆ, ಸೊರಬ ತಾಲ್ಲೂಕು ಇವರನ್ನು ಸಾಗರ ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಸಾಗರ, ಶಿವಮೊಗ್ಗ ಜಿಲ್ಲೆ ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆವಿಗೂ ನಾಮನಿರ್ದೇಶನ ಮಾಡುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್.ಎಸ್. ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ,
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಪಿ.ಆರ್.779

ಆರ್ಥಿಕ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಆಇ 711 ವೆಚ್ಚ–12/10, ಬೆಂಗಳೂರು, ದಿನಾಂಕ:23ನೇ ಆಗಸ್ಟ್, 2010

ದಿನಾಂಕ:20.08.2010ರ ಸಮ ಸಂಖ್ಯೆಯ ಅಧಿಸೂಚನೆಯ ಎರಡನೇ ಕಂಡಿಕೆಯ ಮೊದಲನೇ ವಾಕ್ಯವಾದ "NIC/NICSI ಸಂಸ್ಥೆಯು ಈ ಕಾಮಗಾರಿಗಳನ್ನು ಬೇರೆಯವರ ಮುಖಾಂತರ ಕೈಗೊಳ್ಳುವುದಾದಲ್ಲಿ ಕೆ.ಟಿ.ಪಿ.ಪಿ. ಅಧಿನಿಯಮ ಮತ್ತು ನಿಯಮಗಳನ್ನು ಪಾಲಿಸಬೇಕು" ಎಂಬುದನ್ನು ತೆಗೆದು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್. ಶೇಖರಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಪಿ.ಆರ್.783

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ:ಆಇ 642 ವೆಚ್ಚ–12/10, ಬೆಂಗಳೂರು, ದಿನಾಂಕ:31ನೇ ಆಗಸ್ಟ್, 2010

ವೈದ್ಯಕೀಯ ಶಿಕ್ಷಣ ಇಲಾಖೆಯ ಪರಿಧಿಯೊಳಗೆ ಬರುವ ಆಸ್ಪತ್ರೆಗಳಿಗೆ ಅಗತ್ಯವಿರುವ ಔಷಧಗಳನ್ನು M/s. Karnataka Antibiotics & Pharmaceuticals Ltd., (ಕೆಎಪಿಎಲ್) ಇವರಿಂದ ನೇರವಾಗಿ ಖರೀದಿಸಲು ವೈದ್ಯಕೀಯ ಶಿಕ್ಷಣ ಇಲಾಖೆಯ ಶಿಫಾರಸ್ಸನ್ನು ಪರಿಶೀಲಿಸಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ವೈದ್ಯಕೀಯ ಶಿಕ್ಷಣ ಇಲಾಖೆಗೆ ದಿನಾಂಕ:31.03.2011ರ ವರೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಈ ವಿನಾಯಿತಿಯು ಈ ಕೆಳಕಂಡ ಷರತ್ತುಗಳಿಗೊಳಪಟ್ಟಿರುತ್ತದೆ.

1) ಕೆಎಪಿಎಲ್ ಸಂಸ್ಥೆಯು National Pharmaceuticals Pricing Authority (NPPA)ಯು ನಿಗದಿಪಡಿಸಿದ ದರಗಳ ಅನ್ವಯ ಔಷಧಿಗಳನ್ನು ಸರಬರಾಜು ಮಾಡಬೇಕು.

2) ವೈದ್ಯಕೀಯ ಶಿಕ್ಷಣ ಇಲಾಖೆಯು ಔಷಧಗಳ ಗುಣಮಟ್ಟ ಹಾಗೂ ದರಗಳನ್ನು ಖಚಿತ ಪಡಿಸಿಕೊಳ್ಳಬೇಕು.

3) ಸದರಿ ವಿನಾಯಿತಿಯು ಕೆಎಪಿಎಲ್ ಸಂಸ್ಥೆಯೇ ಉತ್ಪಾದಿಸುವ ಔಷಧಗಳಿಗೆ ಮಾತ್ರ ಅನ್ವಯವಾಗುವುದು. ಇತರೆ ಸಂಸ್ಥೆ/ ತಯಾರಕರಿಂದ ಕೆಎಪಿಎಲ್ ಸಂಸ್ಥೆಯು ಔಷಧ ಇತ್ಯಾದಿಗಳನ್ನು ಖರೀದಿಸಿ, ವೈದ್ಯಕೀಯ ಶಿಕ್ಷಣ ಇಲಾಖೆಗೆ ಸರಬರಾಜು ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್. ಶೇಖರಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಪಿ.ಆರ್.801